# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ**

ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

**ಸಂಖ್ಯೆ : ಸ.ಇಂ/ವಾ-33/ವಾರ್ಡ್‌ಸಭೆ/2022-23** **ದಿನಾಂಕ : 01.10.2022**

## ವಾರ್ಡ್-33(ಕೆಂಗೇರಿ)ರ ವಾರ್ಡ್ ಸಭೆಯ ನಡವಳಿ.

ದಿನಾಂಕ: 01/10/2022 ರಂದು ಕೆಂಗೇರಿ ಉಪ ವಿಭಾಗ ವಾರ್ಡ್-33ರ ವಾರ್ಡ್ ಕಛೇರಿಯಲ್ಲಿ ಶ್ರೀ ಕೆ.ಆರ್.ಸತೀಶ್ ಕುಮಾರ್, ಕಂದಾಯ ಅಧಿಕಾರಿ, ರಾರಾನಗರ ಉಪವಲಯ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

**ಹಾಜರಿದ್ದವರು:**

| ಕ್ರ ಸಂ | ಸದಸ್ಯರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ ಕೆ.ಆರ್.ಸತೀಶ್ ಕುಮಾರ್ | ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಕಂದಾಯ ಅಧಿಕಾರಿ, ರಾರಾನಗರ ಉಪವಲಯ, ಬಿ.ಬಿ.ಎಂ.ಪಿ | ಹಾಜರಿದ್ದರು |
| 2. | ಶ್ರೀ ಎನ್.ನಟರಾಜ | ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ.33, ಕೆಂಗೇರಿ | ಹಾಜರಿದ್ದರು |
| 3. | ಶ್ರೀ ರಾಹುಲ್ ರಾಥೋಡ್ | ಸಹಾಯಕ ಅಭಿಯಂತರರು , ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು |
| 4. | ಡಾ॥ ರೇಷ್ಮಾ | ಹಿರಿಯ ಆರೋಗ್ಯ ವೈಧ್ಯಾಧಿಕಾರಿ ಕೆಂಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರ ಬಿ.ಬಿ.ಎಂ.ಪಿ | ಹಾಜರಿದ್ದರು |
| 5. | ಶ್ರೀ ಬಿ.ಸಿ. ರಾಮು | ಹಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ | ಹಾಜರಿದ್ದರು |
| 6. | ಶ್ರೀಮತಿ ಹರ್ಷಿತ ಆರ್ | ಕಿರಿಯ ಅಭಿಯಂತರರು ಕೆರೆಗಳು, ಬಿಬಿಎಂಪಿ | ಹಾಜರಿದ್ದರು |
| 7. | ಶ್ರೀ ಚಂದ್ರಶೇಖರ್ | ಕಿರಿಯ ಅಭಿಯಂತರರು ಬೆಸ್ಕಾಂ, ಕೆಂಗೇರಿ | ಹಾಜರಿದ್ದರು |
| 8. | ಶ್ರೀ ರವಿಚಂದ್ರ | ಕಿರಿಯ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು |



Scanned with CamScanner

| | | | |
|---|---|---|---|
| 9. | ಶ್ರೀಮತಿ ವಿದ್ಯಾಶ್ರೀ ಉಪ್ಪಾರ್ | ಪಿ.ಎಸ್.ಐ.<br>ಕೆಂಗೇರಿ ಪೊಲೀಸ್ ಠಾಣೆ | ಹಾಜರಿದ್ದರು |
| 10. | ಶ್ರೀ ಬಸವರಾಜು | ಗುತ್ತಿಗೆದಾರರು<br>ಬೀದಿ ದೀಪ ನಿರ್ವಹಣೆ | ಹಾಜರಿದ್ದರು |
| 11. | ಶ್ರೀ ರೇವಣ್ಣ | ಕಂದಾಯ ಪರಿವೀಕ್ಷಕರು<br>ಕೆಂಗೇರಿ ಉಪವಲಯ<br>ಬಿ.ಬಿ.ಎಂ.ಪಿ | ಹಾಜರಿದ್ದರು |
| 12. | ಶ್ರೀ ನವೀನ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು<br>ಘನತ್ಯಾಜ್ಯ ನಿರ್ವಹಣೆ, ಬಿಬಿಎಂಪಿ | ಹಾಜರಿದ್ದರು |
| 13. | ಶ್ರೀ ಸುರೇಶ್ ಎಸ್.ಹೆಚ್ | ಕಂದಾಯ ಪರಿವೀಕ್ಷಕರು<br>ಕೆಂಗೇರಿ ಉಪವಲಯ, ಬಿಬಿಎಂಪಿ | ಹಾಜರಿದ್ದರು |

| ಕ್ರ.ಸಂ | ಸಭೆಗೆ ಗೈರು ಹಾಜರಾದ ಅಧಿಕಾರಿಗಳು | ಇಲಾಖೆ |
|---|---|---|
| 1. | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ, ರಾರಾನಗರ ವಲಯ |
| 2. | ವಲಯ ಅರಣ್ಯ ಅಧಿಕಾರಿಗಳು | ಅರಣ್ಯ ಇಲಾಖೆ, ಬಿ.ಬಿ.ಎಂ.ಪಿ, ರಾಜರಾಜೇಶ್ವರಿನಗರ ವಲಯ, |
| 3. | ತೋಟಗಾರಿಕಾ ಅಧಿಕ್ಷಕರು | ತೋಟಗಾರಿಕೆ ಇಲಾಖೆ, ಬಿಬಿಎಂಪಿ, ರಾಜರಾಜೇಶ್ವರಿನಗರ ವಲಯ, |
| 4. | ಠಾಣಾಧಿಕಾರಿಗಳು<br>ಉಲ್ಲಾಳು ಪೊಲೀಸ್ ಠಾಣೆ | ಆರ್.ಟಿ.ಓ |

1) **<u>ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ</u>:-** ಕೋವಿಡ್-19ರ ಸಾಂಕ್ರಾಮಿಕ ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು, ಮತ್ತು ಕೋವಿಡ್-19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಕೋವಿಡ್-19ರ ಲಸಿಕೆಯನ್ನು ಪಡೆಯಲು ಸಾರ್ವಜನಿಕರು ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸಭೆಯಲ್ಲಿ ತಿಳಿಸಿದರು. ಕೋವಿಡ್ ಸುರಕ್ಷತಾ ನಿಯಮಾವಳಿಯನ್ನು ತಪ್ಪದೇ ಪಾಲಿಸಲು ಮತ್ತು ಮಾಸ್ಕ್ ಹಾಗೂ ಸ್ಯಾನಿಟೈಸರ್ ಖಡ್ಡಾಯವಾಗಿ ಉಪಯೋಗಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸ್ಥಳಿಯ ನಿವಾಸಿಗಳಿಗೆ ಹಾಗೂ ಬಡಾವಣೆಯ ಪ್ರತಿನಿಧಿಗಳಿಗೆ



Scanned with CamScanner

ತಿಳಿಸಲಾಯಿತು ಮತ್ತು ಕೋವಿಡ್ ಬೂಸ್ಟರ್ ಲಸಿಕೆಯನ್ನು ಪಡೆದುಕೊಳ್ಳಲು ಮತ್ತು ಇದರ ಸದುಪಯೋಗ ಪಡೆಯಲು ಭಾಗವಹಿಸಿದ್ದ ಎಲ್ಲರಿಗೂ ಕೋರಲಾಯಿತು.

2) ನಾಗರೀಕರು ಸಭೆಯಲ್ಲಿ ಮಾತನಾಡಿ ವಾರ್ಡ್ ನಂ.33, ಕೆಂಗೇರಿ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿ ಉಂಟಾಗಿರುವ ರಸ್ತೆ ಗುಂಡಿಗಳನ್ನು ಮುಚ್ಚುಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಕೋರಿದರು.

ಈ ಬಗ್ಗೆ ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡಿ ಈ ವಾರ್ಡ್ ನಂ.33(ಕೆಂಗೇರಿ) ವ್ಯಾಪ್ತಿಯಲ್ಲಿನ ಈಗಾಗಲೇ ಭಾಗಶಃ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದ್ದು, ಪ್ರಸ್ತುತ ಮಳೆಗಾಲವಾಗಿರುವುದರಿಂದ ಡಾಂಬರು ಸರಬರಾಜು ಘಟಕವು ತಾತ್ಕಾಲಿಕಾಗಿ ಸ್ಥಗಿತಗೊಂಡಿದ್ದು, ಡಾಂಬರು ಸರಬರಾಜು ನಿಗದಿತ ಸಮಯದಲ್ಲಿ ಸರಬರಾಜು ಆಗದೇ ಇರುವುದರಿಂದ ಉಳಿದ ರಸ್ತೆ ಗುಂಡಿಗಳನ್ನು ಮುಚ್ಚಲು ವಿಳಂಬವಾಗುತ್ತಿದ್ದು, ಡಾಂಬರು ಸರಬರಾಜು ಆದ ನಂತರ ಮುಂಬರುವ ದಿನಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

3) ವಾರ್ಡ್ ನಂ.33ರ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಅಕ್ಕಪಕ್ಕದಲ್ಲಿರುವ ಮರಗಳ ಕೊಂಬೆಗಳನ್ನು ಕತ್ತರಿಸಲಾಗಿದ್ದು, ಅದನ್ನು ತೆರವುಗೊಳಿಸದೇ ಹಾಗೇ ಬಿಟ್ಟಿರುವುದರಿಂದ ಪಾದಾಚಾರಿಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು.

ಈ ಸಂಬಂಧ ವಾರ್ಡ್ ನಂ.33ರ ಸಹಾಯಕ ಅಭಿಯಂತರರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಕತ್ತರಿಸಲಾದ ಮರದಕೊಂಬೆಗಳನ್ನು ತೆರವುಗೊಳಿಸಲು ಕ್ರಮವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

4) ವಾರ್ಡ್‌ನ ನಾಗರೀಕರು ಸಭೆಯಲ್ಲಿ ಮಾತನಾಡಿ ವಾರ್ಡ್ ನಂ.33, ಕೆಂಗೇರಿ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಸರಿಯಾಗಿ ಅಳವಡಿಸದೇ ಇರುವುದರಿಂದ ರಾತ್ರಿ ವೇಳೆಯಲ್ಲಿ ಬೀದಿ ದೀಪಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ತಿಳಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಗುತ್ತಿಗೆದಾರರು(ವಿದ್ಯುತ್) ರವರಿಗೆ ಸದರಿ ಸಮಸ್ಯೆಯನ್ನು ಬಗೆಹರಿಸಲು ಕ್ರಮವಹಿಸುವಂತೆ ಸಭೆಯಲ್ಲಿ ತಿಳಿಸಿದರು.

5) ವಾರ್ಡ್ ನಂ.33, ಕೆಂಗೇರಿ ವ್ಯಾಪ್ತಿಯಲ್ಲಿ ಬರುವ ಕೆಂಗೇರಿ ಕೆರೆಗೆ ಸೆಕ್ಯೂರಿಟಿ ಗಾರ್ಡ್‌ಗಳನ್ನು ನಿಯೋಜಿಸುವಂತೆ, ಸದರಿ ಕೆರೆಯ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಿಲ್ಲವೆಂದು ಹಾಗೂ



Scanned with CamScanner

ತ್ಯಾಜ್ಯ ನೀರು ಕೆರೆಗೆ ಸೇರುತ್ತಿದೆ ಎಂದು ಎಂ.ಟಿ.ಎಸ್ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಕದರಪ್ಪರವರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

6) ವಾರ್ಡ್ ನಂ.33, ಕೆಂಗೇರಿ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವುದರಿಂದ, ಉದ್ಯಾನವನಗಳ ಗೇಟ್‌ಗಳು ಮತ್ತು ಉದ್ಯಾನವನಗಳಿಗೆ ಅಳವಡಿಸಿರುವ ಫೆನ್ಸಿಂಗ್ ಹಾಳಾಗಿರುತ್ತವೆ. ಆದುದರಿಂದ ಉದ್ಯಾನವನಗಳನ್ನು ಸರಿಯಾಗಿ ನಿರ್ವಹಣೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ನಾಗರೀಕರು ಹಾಗೂ ವಾರ್ಡ್ ಸಮಿತಿ ಸದಸ್ಯರು ಸಭೆಯಲ್ಲಿ ಕೋರಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

(ಕೆ.ಆರ್.ಸತೀಶ್ ಕುಮಾರ್)
ಕಂದಾಯ ಅಧಿಕಾರಿ
ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು
[illegible] ಕೆಂಗೇರಿ [illegible]

ರವರಿಗೆ,

1) ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ರವರ ಕಛೇರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ಸಹಾಯಕ ಕಂದಾಯ ಅಧಿಕಾರಿ ಅಧಿಕಾರಿಗಳು, ಕೆಂಗೇರಿ ವಲಯ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘ.ತ್ಯಾ.ನಿ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
5) ಪೊಲೀಸ್ ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್ ಠಾಣೆ (ಕಾನೂನು ಸುವ್ಯವಸ್ಥೆ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
6) ಪೊಲೀಸ್ ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್ ಠಾಣೆ (ಸಂಚಾರಿ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
7) ಆರೋಗ್ಯ ಅಧಿಕಾರಿ, ಕೆಂಗೇರಿ, ಕೆಂಗೇರಿ ಉಪನಗರ ಪ್ರಾ.ಆ.ಕೇಂದ್ರ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
8) ಸಹಾಯಕ ಇಂಜಿನಿಯರ್, ಬೆಸ್ಕಾಂ ಕೆಂಗೇರಿ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
9) ಸಹಾಯಕ ಇಂಜಿನಿಯರ್ ಬಿ.ಡಬ್ಲ್ಯೂ.ಎಸ್. ಎಸ್.ಬಿ., ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.



Scanned with CamScanner

10) ತೋಟಗಾರಿಕಾ ಅಧೀಕ್ಷಕರು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.

11) ವಾರ್ಡ್ ವ್ಯಾಪ್ತಿಯ ಸಾರ್ವಜನಿಕರು, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಲು ಅನುವಾಗುವಂತೆ ಸೂಚನಾ ಫಲಕಕ್ಕೆ ಅಳವಡಿಸಲು

12) ಎಲ್ಲಾ ವಾರ್ಡ್ ಕಮಿಟಿ ಸದಸ್ಯರುಗಳಿಗೆ.



Scanned with CamScanner